ಕ್ರಿಮಿನಲ್.ಮಿಸ್ಲೇನಿಯಸ್.ನಂ. 1444/2022

ಪಿ.ಡಬ್ಲ್ಯೂ -3

**<u>ಸಾಕ್ಷಿಯನ್ನು ಇಂದು ದಿನಾಂಕಃ 04.11.2024 ರಂದು ಕರೆದು ಪ್ರಮಾಣೀಕರಿಸಲಾಯಿತು</u>**

**<u>ಪಾಟೀ ಸವಾಲು ಎದುರುದಾರ ಪರ ಶ್ರೀ ಡಿ.ಎಂ.ಎಂ. ವಕೀಲರಿಂದ</u>**

ನನಗೆ 4 ಎಕರೆ ಜಮೀನು ಇರುತ್ತದೆ. ಅರ್ಜಿದಾರರ ತಂದೆಯ ಜಮೀನು 3 ಎಕರೆ ಇರುತ್ತದೆ. ಅರ್ಜಿದಾರರ ತಂದೆಯ ಜಮೀನಿನಲ್ಲಿ ತೊಗರಿ ಬೆಳೆ ಇರುತ್ತದೆ. ಎದುರುದಾರರ ಜೊತೆ ನನ್ನದು ಮೂರು ಬಾರಿ ಮಾತುಕತೆ ಆಗಿರುತ್ತದೆ. ಎದುರುದಾರರ ಮನೆಯಲ್ಲಿಯೇ ಸುಮಾರು ಮೂರು ಬಾರಿ ಹಿರಿಯರ ಸಮಕ್ಷಮ ಆಗಿರುತ್ತದೆ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಗೆ ಹೇಳಿರುತ್ತೇನೆಯೋ ಹಾಗೆ ಗಣಕೀಕೃತ ಮಾಡಿರುವುದಿಲ್ಲ ಎಂದರೆ ಸರಿ ಅಲ್ಲ. ಅರ್ಜಿದಾರರು ಮತ್ತು ಎದುರುದಾರರ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಸರಿಯಾಗಿದ್ದಾರೆ ಎಂದು ಹೇಳಿ ಮದುವೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಎದುರುದಾರರು ಮತ್ತು ಅವರ ಕುಟುಂಬದವರು ಅರ್ಜಿದಾರರಿಗೆ ವರದಕ್ಷಿಣೆ ಎಲ್ಲಿ ಕೇಳಿದ್ದಾರೆ, ಯಾವಾಗ ಕೇಳಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂಥರೆ ಸರಿ ಅಲ್ಲ. ಅರ್ಜಿದಾರರ ಮನೆಯಲ್ಲಿ ಆರು ಜನರು ವಾಸ ಮಾಡುತ್ತಾರೆ. ಅರ್ಜಿದಾರಳ ಸಹೋದರ ಶಿಕ್ಷಕನೆಂದು ಕರ್ತವ್ಯ ನಿರ್ವಹಿಸುತ್ತಿದ್ದಾನೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಕಿರಾಣಿ ಅಂಗಡಿ ನಡೆಸಿಕೊಂಡು ಹೋಗುತ್ತಿದ್ದಾನೆ ಎಂದು ನುಡಿಯುತ್ತಾರೆ. ಅರ್ಜಿದಾರರ ಮತ್ತು ಅವರ ತಂದೆಯ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ.ಸಿ.ಆಳಂದ.